
# ಉನ್ನತ ಜೀವನ : ವ್ಯಕ್ತಿತ್ವ ವಿಕಸನದ ಸಾಧನೆ - ೨

ಡಾ. ಇ. ವಸಂತ ಕುಮಾರ್




## ಪ್ರಯತ್ನ : ಯೋಗ್ಯತೆ-ಮಿತಿ

ಒಂದು ಯೋಗ್ಯ ದಿಕ್ಕಿನಲ್ಲಿ ಮುಂದುವರಿಯಲು ಪ್ರಯತ್ನಿಸುವಂತೆ, ಸ್ವಲ್ಪ ಮೇಲ್ಮಟ್ಟದ ಆದರ್ಶವನ್ನು ಅನುಸರಿಸುವಂತೆ, ಹಿತೈಷಿಗಳು, ತಜ್ಞರು, ಸಲಹೆ ನೀಡಿದಾಗ ಕೂಡಲೇ ನಾವು ಅದಕ್ಕೆ ಯೋಗ್ಯರಲ್ಲವೆಂದೂ ಅದು ನಮಗೆ ಎಂದೂ ಎಟುಕಲಾರದೆಂದೂ ಹೇಳುವೆವು. ಒಂದು ಯೋಗ್ಯತೆ ನಮ್ಮಲ್ಲಿರುವುದೆಂದು ನಮಗೆ ಗೊತ್ತಾಗುವುದು ನಾವು ಪ್ರಯತ್ನ ಮಾಡಿದಾಗಲೆ. ಅಂತೆಯೇ ಆ ಯೋಗ್ಯತೆ, ಶಕ್ತಿ ನಮ್ಮಲ್ಲಿಲ್ಲವೆಂಬುದು ತಿಳಿಯುವುದೂ ಕೂಡ ಪ್ರಯತ್ನದ ನಂತರವೇ. ನಮ್ಮ ಯೋಗ್ಯತೆ, ಶಕ್ತಿ, ಸಾಮರ್ಥ್ಯ ನಮಗೆ ಬಹಳ ಚೆನ್ನಾಗಿ ತಿಳಿದಿರುವುದು ಎಂದು ಭಾವಿಸುವೆವು. ಇದು ನಿಜವಲ್ಲ. ಹಾಗಿದ್ದಿದ್ದರೆ ನಮ್ಮ ವ್ಯಕ್ತಿತ್ವದ ವಿಕಾಸಕ್ಕೆ ನಾವು ಪ್ರಯತ್ನ ಪಡಬೇಕಾದುದೇ ಇರಲಿಲ್ಲ; ಉನ್ನತ ಜೀವನವೆಂಬುದೇ ಇರುತ್ತಿರಲಿಲ್ಲ. ಇಂದು ಡೇಲ್ ಕಾರ್ನೆಗಿ ಎಂಬ ಹೆಸರನ್ನು ಕೇಳದವರಿಲ್ಲ. *How to Stop Worrying and Start Living, How to Win Friends and Influence People, How to Develop Self-Confidence by Public Speaking* ಮುಂತಾದ ಅವರ ಪುಸ್ತಕಗಳು ವಿಶ್ವಾದ್ಯಂತ ಜನಪ್ರಿಯವಾಗಿ ಇಂದಿಗೂ ಲಕ್ಷಗಟ್ಟಲೆ ಪ್ರತಿಗಳು ಮುದ್ರಿತವಾಗುತ್ತಿವೆ. ಕಾರ್ನೆಗಿ ಹಾಲ್ ಎಂಬ ಸ್ಮಾರಕ ಭವನ ಅಮೆರಿಕದಲ್ಲಿದೆ. ಅವರು ಪ್ರತಿಭಾವಂತ ಹಾಗೂ ಪರಿಣಾಮಕಾರಿ ಭಾಷಣಕಾರರಾಗಿದ್ದುದಲ್ಲದೆ, ಉದ್ಯಮಿಗಳು ತಮ್ಮ ವೃತ್ತಿಯಲ್ಲಿ ಮಾತು, ನಡವಳಿಕೆ, ಸಂವಾದ, ವಿಷಯ ಪ್ರತಿಪಾದನೆಯಿಂದ ಯಶಸ್ಸನ್ನು ಗಳಿಸುವುದು ಹೇಗೆ ಎಂಬುದರ ಬಗ್ಗೆ ತರಪೇತು ನೀಡುವುದರ ಮೂಲಕ ವಿಶ್ವವಿಖ್ಯಾತರಾದರು. ಆದರೆ ಅವರು ಬಾಲಕರಾಗಿದ್ದಾಗ ಹಣದ ಅಭಾವದಿಂದಾಗಿ ಶಾಲೆಗೆ ಹೋಗಲು ಸಾಧ್ಯವಾಗಲಿಲ್ಲ. ಜೊತೆಗೆ ಇವನಿಗೆ ಬಾಲ್ಯದಲ್ಲಿ ಬಿಕ್ಕಲು ಬರುತ್ತಿದ್ದು, ಅತ್ಯಂತ ಸಂಕೋಚ ಪ್ರಕೃತಿಯವನಾಗಿದ್ದನಂತೆ. ಅವನ ಭವಿಷ್ಯದ ಬಗ್ಗೆ ಚಿಂತಿತಳಾದ ತಾಯಿ ಅವನನ್ನು ಅದೇ ಊರಿನ ಭಾಷಣ ಕಲೆ ತರಬೇತಿ ಶಾಲೆಗೆ ಸೇರಿಸಿದಳಂತೆ. ಇಂತಹ ಹುಡುಗನಲ್ಲಿ ಮಾತಿನ ಕಲೆಯನ್ನು ಪ್ರಪಂಚಕ್ಕೆ ಬೋಧಿಸುವ ಆಚಾರ್ಯವ್ಯಕ್ತಿತ್ವ ಹುದುಗಿತ್ತೆಂದು ಊಹಿಸಲು ಸಾಧ್ಯವೇ?

## ಪ್ರಯತ್ನ - ಅದೃಷ್ಟ

ನಮ್ಮ ಜನಾಂಗಕ್ಕೆ ಇಂದಿನ ಆವಶ್ಯಕತೆ ಬುದ್ಧಿವಂತಿಕೆಯಲ್ಲ, ಸರಿ ಎಂದು ತೋರಿದುದನ್ನು ಮಾಡುವ ಧೈರ್ಯ ಎಂಬ ಒಂದು ಹೇಳಿಕೆಯಿದೆ. ಯುವ ಪೀಳಿಗೆಯಲ್ಲಿ ಆವಶ್ಯಕವಾಗಿ ಬೇಕಾಗಿರುವುದು ಪ್ರಯತ್ನದಲ್ಲಿ ವಿಶ್ವಾಸ—ಯತ್ನಶೀಲತೆ. ವಿಫಲತೆಯ ಅಂಜಿಕೆ ಸೋಮಾರಿತನದ ಚಿಹ್ನೆ. ನಮ್ಮ ಶಾಸ್ತ್ರಗಳಲ್ಲಿ ಪುರುಷ ಪ್ರಯತ್ನದ ಕುರಿತು ಹೇಳಿದ್ದಾರೆ. ಪುರುಷಪ್ರಯತ್ನವನ್ನು ಪ್ರಸ್ತಾಪಿಸಿದಾಗ ನಮ್ಮ ಯುವಕರು ಕೂಡಲೇ ಅದೃಷ್ಟ ಮತ್ತು ದೈವಕೃಪೆಯ ಮಾತನ್ನು ತರುವರು. ಇದು ಪ್ರಯತ್ನದಿಂದ ತಪ್ಪಿಸಿಕೊಳ್ಳುವುದಕ್ಕೆ, ಪ್ರಯತ್ನಿಸುವಲ್ಲಿ ಚೌಕಾಸಿ ಮಾಡುವುದಕ್ಕೆ ಮತ್ತು ಪ್ರಯತ್ನದ ಮಹತ್ತ್ವವನ್ನು ಕುಗ್ಗಿಸುವುದಕ್ಕೆ ಬುದ್ಧಿವಂತ ಸೋಮಾರಿಗಳು ಕಾಲಕಾಲಕ್ಕೆ ಒಡ್ಡುತ್ತಿರುವ ನೆಪ. ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಪೀಟರ್ ಬ್ರಯಾನ್ ಮೆದವರ್ ಎಂಬುವರು *Advice to a Young Scientist* (ಯುವ ವಿಜ್ಞಾನಿಗೆ ಬುದ್ಧಿಮಾತು) ಎಂಬ ಅವರ ಸಣ್ಣ ಪುಸ್ತಕದಲ್ಲಿ, 'ಅದೃಷ್ಟ ಪರಿಶ್ರಮವನ್ನು ಹಿಂಬಾಲಿಸುವುದು' ಎಂದು ಹೇಳಿರುವರು. ಇಂದು ನಮ್ಮ ಯುವಕರಲ್ಲಿ ವಿಶ್ವಾಸ ಹೆಚ್ಚುಹೆಚ್ಚಾಗಿ ಇರಬೇಕಾದುದು ಸ್ವಪ್ರಯತ್ನದಲ್ಲಿ, ಕಾರ್ಯ-ಕಾರಣ ಸಂಬಂಧದಲ್ಲಿ, ಸ್ವತಂತ್ರ ಆಲೋಚನಾಶಕ್ತಿಯಲ್ಲಿ; ಅಂತೆ-ಕಂತೆಗಳ ಪಂಥದಲ್ಲಲ್ಲ.

ಮಾನವನ ಶಿಶು ಮನುಷ್ಯನೇ ಆಗಿರುವುದು, ಚಿರತೆಯ ಮರಿ ಚಿರತೆಯೇ ಆಗಿರುವುದು, ಮಾವಿನಬೀಜವನ್ನು ನೆಟ್ಟರೆ ಮಾವಿನಗಿಡವೇ ಹುಟ್ಟುವುದು ಎಂಬುದು ಎಲ್ಲರಿಗೂ ತಿಳಿದ ವಿಷಯವಾದರೂ, ಇದಕ್ಕೆ ಕಾರಣವೇನು ಎಂಬುದು ಇತ್ತೀಚಿನವರೆಗೂ ಮಾನವನಿಗೆ ತಿಳಿದಿರಲಿಲ್ಲ. ಸುಮಾರು ೧೯೨೦ರ ವೇಳೆಗೆ ಇದಕ್ಕೆ ಕಾರಣ ವಂಶವಾಹಿ (gene) ಎಂದೇನೋ ತಿಳಿಯಿತು. ನಂತರ, ಅದರಲ್ಲಿರುವ DNA (ಡಿ.ಎನ್.ಎ.) ಎಂಬ ವಸ್ತು ಇದಕ್ಕೆ ಕಾರಣ ಎಂದು ತಿಳಿದುಬಂದಿತು. ಆದರೆ DNAಗಳ ರಚನೆ ಹೇಗೆ ಆಗಿದೆ ಎಂದು ತಿಳಿದ ಹೊರತು ಅದು ಹೇಗೆ ಕೆಲಸ ಮಾಡುವುದು ಎನ್ನುವುದು ಗೊತ್ತಾಗುವಂತಿಲ್ಲ. ಇತ್ತೀಚೆಗೆ

ಶ್ರೀಸಾಮಾನ್ಯರಿಗೂ, ರಾಜಕೀಯ ವ್ಯಕ್ತಿಗಳಿಗೂ ಇದು ಸಾಕಷ್ಟು ಪರಿಚಿತವಾಗಿದ್ದು ಇದರ ಸಹಾಯದಿಂದ ಅನೇಕಾನೇಕ ಅಪರಾಧ ಗಳು ನಿರ್ವಿವಾದವಾಗಿ ತೀರ್ಮಾನಗೊಳ್ಳುತ್ತಿರುವುವು.. ಆದರೆ DNA ಎಂಬ ಆಮ್ಲದ ಅಣು ರಚನಾವಿನ್ಯಾಸ ೧೯೫೦ರಲ್ಲೂ ಸಹ ಮೇಧಾವಿ ವಿಜ್ಞಾನಿಗಳಿಗೂ ಬಗೆಹರಿಯದ ಒಗಟಾಗಿತ್ತು. ಕೊನೆಗೆ ಇದನ್ನು ಕಂಡುಹಿಡಿದವನು ಜೇಮ್ಸ್ ಡ್ಯೂಯಿ ವ್ಯಾಟ್ಸನ್ ಎಂಬ ಅಮೆರಿಕದ ಯುವಕ. ಈ ಹೆಸರು ಇಂದಿನ ಪ್ರೌಢಶಾಲೆಯ ವಿದ್ಯಾರ್ಥಿಗೂ ಸುಪರಿಚಿತ. ಆದರೆ ಈ ಘಟನೆಯ ರೋಮಾಂಚಕ ಹಿನ್ನೆಲೆ ಅಷ್ಟು ಬಹಿರಂಗವಾಗಿಲ್ಲ. ಈ ಆವಿಷ್ಕಾರವಾದುದು ೧೯೫೩ರಲ್ಲಿ. ಆಗ ವ್ಯಾಟ್ಸನ್ ಇನ್ನೂ ೨೫ ವರ್ಷದ ತರುಣ. ಒಂಬತ್ತು ವರ್ಷಗಳ ಅನಂತರ ಆತನಿಗೆ ಮತ್ತು ಅವನ ಸ್ನೇಹಿತ ಕ್ರಿಕ್ ಮತ್ತು ಪ್ರೊಫೆಸರ್ ವಿಲ್ಕಿನ್ಸ್ ಸೇರಿದಂತೆ ಮೂವರಿಗೂ ಜಂಟಿಯಾಗಿ ೧೯೬೨ರಲ್ಲಿ ನೊಬೆಲ್ ಪ್ರಶಸ್ತಿ ನೀಡಲಾಯಿತು. ವ್ಯಾಟ್ಸನ್‌ನ ಜತೆಗಾರ, ಮಿತ್ರ ಕ್ರಿಕ್ ೧೯೫೩ರಲ್ಲಿ ತನ್ನ ಪಿ.ಎಚ್.ಡಿ. ಸಂಶೋಧನೆಯನ್ನು ಮುಗಿಸಿರಲಿಲ್ಲವೆಂಬುದು ಸೋಜಿಗದ ಸಂಗತಿ. ಈ ಸಂಶೋಧನೆ ೨೦ನೆಯ ಶತಮಾನದ ಜೀವವಿಜ್ಞಾನದ ಅತ್ಯಂತ ಮುಖ್ಯ ಆವಿಷ್ಕಾರವೆಂದು ಪರಿಗಣಿತ ವಾಗಿದೆ. DNAಅಣುವಿನ್ಯಾಸವನ್ನು ತಿಳಿದುಕೊಳ್ಳಬೇಕಾದರೆ, ಪ್ರೌಢ ರಸಾಯನಶಾಸ್ತ್ರದಲ್ಲಿ ಪಾರಂಗತರಾಗಿರಬೇಕು. ಆದರೆ ತರುಣ ವ್ಯಾಟ್ಸನ್ ಪಿ.ಎಚ್.ಡಿ ಪಡೆದಿದ್ದುದು ಜೀವಶಾಸ್ತ್ರದಲ್ಲಿ. ಆತ ಕುಶಾಗ್ರಮತಿಯೆಂದು ಅವನ ಉಪಾಧ್ಯಾಯರುಗಳಿಗೆ ತಿಳಿದಿತ್ತು. ಆದರೆ ವ್ಯಾಟ್ಸನ್ ತನ್ನ ವ್ಯಾಸಂಗದ ಕಾಲದಲ್ಲಿ ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರಗಳ ತರಗತಿಗಳಿಗೆ ಗೈರು ಹಾಜರಾಗಿದ್ದ! ಅದರಲ್ಲಿ ಅವನ ಜ್ಞಾನ ಶೂನ್ಯ! ಆದಕಾರಣ, ರಸಾಯನ ಶಾಸ್ತ್ರದಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಧನಸಹಾಯದೊಂದಿಗೆ ಒಂದು ವರ್ಷ ಅವನನ್ನು ಕೋಪನ್‌ಹೇಗನ್‌ಗೆ ಕಳುಹಿಸಿಕೊಟ್ಟರು. ಅಲ್ಲಿಯೂ ಅವನು ತರಗತಿಗಳಿಗೆ ಚಕ್ಕರ್ ಹೊಡೆದು ಹೊರಗೆ ಅಲೆಯುತ್ತಿದ್ದ. ಆತನ ಸಮಯ ಮೀರುತ್ತಿದೆ ಎಂದು ಅಧಿಕಾರಿಗಳು ಎಚ್ಚರಿಸುತ್ತಿದ್ದರು. ಆ ಸಮಯದಲ್ಲಿ DNA ರಚನಾವಿನ್ಯಾಸವನ್ನು ಕಂಡುಹಿಡಿಯಲು ಶ್ರಮಿಸುತ್ತಿದ್ದವರು ರಸಾಯನಶಾಸ್ತ್ರದಲ್ಲಿ ಅತ್ಯಂತ ಪ್ರಾಜ್ಞರು, ಧುರೀಣರು, ಮೇಧಾವಿಗಳು ಎಂದು ಹೆಸರು ಪಡೆದಿದ್ದ ಪ್ರೊಫೆಸರ್‌ಗಳು. ಇಂತಹ ಸಮಯದಲ್ಲಿ ಜ್ಞಾನವಧು ಈ ರಸಾಯನಶಾಸ್ತ್ರ ಜ್ಞಾನಶೂನ್ಯನಿಗೆ ಮಾಲೆ ಹಾಕಿದಳು! ಇದು ಕೇವಲ ಅದೃಷ್ಟದಿಂದ ಆಗಲಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ವ್ಯಾಟ್ಸನ್ ಯಾವುದೊ ಒಂದು ಉಪನ್ಯಾಸವನ್ನು ಕೇಳುವಾಗ ಅವನ ಗಮನ DNA ಕಡೆ ಹರಿಯಿತು. ಆಗ, ಅದರ ರಹಸ್ಯವನ್ನು ಭೇದಿಸಿ ತಾನು ವಿಶ್ವವಿಖ್ಯಾತನಾಗಬಹುದೆಂದು ಕನಸು ಕಂಡನಂತೆ. ಆಗ DNA ರಚನೆಯ ರಹಸ್ಯವನ್ನು ಕಂಡುಹಿಡಿಯಲು ಹೆಸರಾಂತ ವಿಜ್ಞಾನಿಗಳು ಎರಡು ಮಾರ್ಗಗಳಲ್ಲಿ ಪ್ರಯತ್ನಿಸು ತ್ತಿದ್ದರು: ಒಂದು ಎಕ್ಸ್‌ರೇ ವಿಧಾನ, ಇನ್ನೊಂದು ಕ್ರಿಸ್ಟಲಾಗ್ರಫಿ. ವ್ಯಾಟ್ಸನ್, ಇವೆರಡೂ ಜ್ಞಾನಗಳಿಲ್ಲದ ಅನಾಮಧೇಯ! ಆದರೆ ಆತ ಛಲಗಾರ. ಸಂಶೋಧನೆ ಎಂದರೆ ಶ್ರಮದ ದುಡಿತ ಮತ್ತು ಕ್ರಮಬದ್ಧತೆ ಎಂದು ಅವನು ಅರಿತಿದ್ದ. DNAಗೆ ಸಂಬಂಧಪಟ್ಟ ರಸಾಯನಶಾಸ್ತ್ರ, ಎಕ್ಸ್‌ರೇ, ಕ್ರಿಸ್ಟಲಾಗ್ರಫಿಗೆ ಸಂಬಂಧಿಸಿದ ಅನೇಕ ಸಂಶೋಧನ ಲೇಖನಗಳನ್ನೆಲ್ಲಾ ಆಳವಾಗಿ ಅಧ್ಯಯನ ಮಾಡಿ, ಸಮಸ್ಯೆಯನ್ನು ಕುರಿತು ಹಗಲು ರಾತ್ರಿ ಚಿಂತಿಸಿ, ವೈಫಲ್ಯ, ನಿರಾಶೆ, ಅವಹೇಳನಗಳಿಂದ ಎದೆಗುಂದದೆ ತನ್ನ ಪ್ರಯತ್ನವನ್ನು ಮುಂದು ವರಿಸಿದ. ಅವನನ್ನು ಕೋಪನ್‌ಹೇಗನ್‌ಗೆ ಕಳುಹಿಸಿದ್ದರು. ಅವನು ಅದನ್ನು ತೊರೆದು ಇಂಗ್ಲೆಂಡಿನ ಕ್ಯಾವೆಂಡಿಷ್ ಪ್ರಯೋಗ ಶಾಲೆಯಲ್ಲಿ ಸಂಶೋಧನೆ ಮಾಡುತ್ತಿದ್ದ. ಸೂಚಿಸಿದ ಸ್ಥಳದಲ್ಲಿ ನಿಗದಿತ ವಿಷಯದ ಅಧ್ಯಯನ ಮಾಡಲಿಲ್ಲವೆಂಬ ಕಾರಣಕ್ಕಾಗಿ ವಿಶ್ವವಿದ್ಯಾನಿಲಯದವರು ಅವನಿಗೆ ಕೊಡುತ್ತಿದ್ದ ಹಣವನ್ನು ನಿಲ್ಲಿಸಿದರು! ಅವನ ಕೆಲಸಕ್ಕೆ, ಆಲೋಚನೆಗೆ ಸಹಾಯ ಮತ್ತು ಸ್ಫೂರ್ತಿಯ ಚಿಲುಮೆಯಂತಿದ್ದ ತರುಣ ಮಿತ್ರ ಕ್ರಿಕ್ ತನ್ನ ಪಿ.ಎಚ್.ಡಿ.ಗಾಗಿ ದುಡಿಯಬೇಕಿತ್ತು. ವ್ಯಾಟ್ಸನ್ ವಾಸಿಸುತ್ತಿದ್ದ ಮನೆ ಯಾವ ಅನುಕೂಲಗಳೂ ಇರದ ಕೊರೆಯುವ ಶೈತ್ಯಾಗಾರ ವಾಗಿತ್ತು. ಹಿಂಭಾಗದ ಮುರುಕಲು ಕೋಣೆಯಲ್ಲಿ ವ್ಯಾಟ್ಸನ್ನನ DNA ಅಣುವಿನ್ಯಾಸದ ಮಾದರಿ ತಯಾರಾಯಿತು. DNA ರಹಸ್ಯ ವನ್ನು ಭೇದಿಸಲು ತಮ್ಮ ಜೀವಿತವನ್ನು ಮುಡಿಪಾಗಿಟ್ಟಿದ್ದ ಪ್ರಾಜ್ಞ ರಸಾಯನಶಾಸ್ತ್ರಜ್ಞರು ತಲೆದೂಗುವಂತೆ ಶಾಸ್ತ್ರಬದ್ಧವಾಗಿ, ಸುಸಂಬದ್ಧವಾಗಿ ವ್ಯಾಟ್ಸನ್ ಅಣುವಿನ್ಯಾಸವನ್ನು ರಚಿಸಿದ್ದ! ಅವನ ಯಶಸ್ಸಿನ ಸಾಧನೆಗಳೆಂದರೆ ವಿಪುಲ ಯತ್ನಗಳ ರಾಶಿ, ಕನಸನ್ನು ನನಸಾಗಿಸುವ ಇಚ್ಛಾಶಕ್ತಿ, ಶಾಸ್ತ್ರಯುಕ್ತ ಕಲ್ಪನಾಶಕ್ತಿ, ಕಾರ್ಯ-ಕಾರಣ ಸಂಬಂಧದಲ್ಲಿ ದೃಢ ವಿಶ್ವಾಸ ಮತ್ತು ಎದೆಗುಂದದ ಪ್ರಯತ್ನ. ಅವನ ಆವಿಷ್ಕಾರ ಪ್ರಯತ್ನವಲ್ಲ, ಪ್ರಯತ್ನದ ಪರಾಕಾಷ್ಠೆ!

## ಸಾಧಕರ ಜೀವನ-ಚೈತನ್ಯಕ್ಕೆ ಪೋಷಣೆ

ನಮ್ಮ ತರುಣಮಿತ್ರರು, ಸ್ಫೂರ್ತಿ ಮತ್ತು ಚೈತನ್ಯಕ್ಕಾಗಿ, ಜೀವನ ದಲ್ಲಿ ಬೇಕಾದ ಉದಾತ್ತ ಧ್ಯೇಯಕ್ಕಾಗಿ, ಮಾನವ ಜೀವನದ ಪ್ರಗತಿ ಗಾಗಿ ಮಾನವ ಚೈತನ್ಯದ ವಿಕಾಸಕ್ಕೆ ಹಾದಿ ತೋರಿರುವ ಪ್ರಸಿದ್ಧ ಕಲಾವಿದರ, ವಿಜ್ಞಾನಿಗಳ, ದ್ರಷ್ಟಾರರ, ನಿಃಸ್ವಾರ್ಥ ಕರ್ಮಿಗಳ ಜೀವನವನ್ನು ಓದಬೇಕು. ಇಂತಹವರು ನಮ್ಮ ದೇಶದ ಎಲ್ಲ ಭಾಗಗಳಲ್ಲಿಯೂ ಎಲ್ಲ ಸಾಮಾಜಿಕ ವರ್ಗಗಳಲ್ಲಿಯೂ ಬಹು ಸಂಖ್ಯೆಯಲ್ಲಿ ಇರುವರು. ಮನರಂಜನೆ, ಲಾಭಪ್ರಧಾನವಾಗಿರುವ ಕಾದಂಬರಿ, ಚಲನಚಿತ್ರಗಳಲ್ಲಿ ಮೌಲ್ಯಗಳನ್ನು ಸಮರ್ಪಕವಾಗಿ ಸಪ್ರಮಾಣದೊಂದಿಗೆ ಬಿಂಬಿಸುವುದು ಅಸಾಧ್ಯ. ಇವುಗಳಲ್ಲಿ ಕಾಲ್ಪನಿಕ ಸಮಸ್ಯೆಗಳ ಪರಿಹಾರವನ್ನು ತರಲು ಯತ್ನಿಸುವರು. ನಿಜಜೀವನದ ಸಮಸ್ಯೆಗಳೊಂದಿಗೆ ಹೋರಾಡುವುದರಲ್ಲಿ ಆದರ್ಶ ವ್ಯಕ್ತಿಗಳು ತೋರುವ ಸಾಹಸ, ಅದರ ಜೊತೆಗಿನ ಸಾಧನೆ, ಅದಕ್ಕಾಗಿ ಅವರು ಮಾಡಿದ ತ್ಯಾಗ ಮುಂತಾದುವು ನಮ್ಮ ಜೀವನವನ್ನು ಕಟ್ಟುವುದಕ್ಕೆ, ನಮ್ಮ ಚೈತನ್ಯದ ವಿಕಾಸಕ್ಕೆ ನೆರವಾಗುವುವು.

ದೃಷ್ಟಿಕೋನ

ನಮ್ಮ ವ್ಯಕ್ತಿತ್ವದ ವಿಕಾಸಕ್ಕಾಗಿ ನಾವು ಬೆಳೆಸಿಕೊಳ್ಳಬಹುದಾದ ಕೆಲವು ದೃಷ್ಟಿಕೋನಗಳನ್ನು ಮುಂದಿನ ಸಂಚಿಕೆಯಲ್ಲಿ ಸೂಚಿಸ ಲಾಗುವುದು. ಸಮಸ್ಯೆಗಳಿಲ್ಲದ ಜೀವನವಿಲ್ಲ. ಅವುಗಳಿಂದ ಓಡಿ ಹೋಗದೆ ಅವುಗಳನ್ನು ಎದುರಿಸಿ ಹೋರಾಡಬೇಕು. ಇದು ವ್ಯಕ್ತಿ, ಸಮಾಜ, ದೇಶ, ಪ್ರಪಂಚ –ಎಲ್ಲದರ ಬಗ್ಗೆಯೂ ನಿಜ. ನಮ್ಮ ಯಶಸ್ಸಿಗೆ ನಾವು ಎಷ್ಟು ಕಾರಣರೋ ನಮ್ಮ ತಪ್ಪುಗಳಿಗೂ ನಾವು ಅಷ್ಟೇ ಕಾರಣರು. ನಮ್ಮ ದೋಷಗಳಿಗೆ ಕಾರಣವನ್ನು ಇತರರಲ್ಲಿ ಹುಡುಕುವ ಮೂರ್ಖ ಪ್ರಯತ್ನವನ್ನು ಮಾಡದೆ ನಮ್ಮಲ್ಲಿಯೇ ಹುಡುಕಲು ಯತ್ನಿಸಿದರೆ ನಾವು ವ್ಯಕ್ತಿತ್ವವಿಕಸನದ ಪಥದಲ್ಲಿ ಒಂದು ದಿಟ್ಟ ಹೆಜ್ಜೆಯನ್ನಿಟ್ಟಂತೆ. ನಮ್ಮ ಕೆಲಸ-ಕಾರ್ಯಗಳ, ಅದರ ಆಗುಹೋಗುಗಳ, ಅದರ ಪರಿಣಾಮಗಳ ಜವಾಬ್ದಾರಿಯನ್ನು ನಾವೇ ತೆಗೆದುಕೊಳ್ಳಬೇಕು. ಆಗ ಸಿಗುವ ಯಶಸ್ಸು, ನಮ್ಮ ಯೋಗ್ಯತೆಯ ಅರಿವು ಮೂಡಿಸಿ, ನಮ್ಮಲ್ಲಿ ಆತ್ಮವಿಶ್ವಾಸವನ್ನು ತುಂಬುವುದು. ಆತ್ಮವಿಶ್ವಾಸದ ಆಧಾರ ಯೋಗ್ಯತೆ, ಪರಿಣತಿ.

(ಮುಂದುವರೆಯುವುದು)

# ಕೇಳಿ ತಿಳಿಯಿರಿ

**ಈ ಹೊಸ ಅಂಕಣದಲ್ಲಿ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಉತ್ತರ ನೀಡಲಾಗುವುದು. ಹಿರಿಯ ಸಾಧುಗಳು ಉತ್ತರ ನೀಡುವರು. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ, ಕೆಲವೇ ವಾಕ್ಯಗಳಲ್ಲಿ ನಮ್ಮ ವಿಳಾಸಕ್ಕೆ ಬರೆದು ಕಳುಹಿಸಬಹುದು. ಈ ಬಾರಿ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಅಕ್ಕರೆ-ಆಸಕ್ತಿಯಿಂದ ಬರೆದಿರುವ ಶ್ರೀಮಾತೆ ಶಾರದಾದೇವಿಯವರ ಶಿಷ್ಯರಾಗಿದ್ದ ಪೂಜ್ಯ ಸ್ವಾಮಿ ಪ್ರೇಮೇಶಾನಂದರ (೧೮೮೪-೧೯೬೧) ಬಂಗಾಳಿ ಹಾಗೂ ಆಂಗ್ಲ ಭಾಷೆಯಲ್ಲಿ ಪ್ರಕಟವಾಗಿರುವ *Go Forward* ಗ್ರಂಥವನ್ನು ಆಧರಿಸಿ ಕನ್ನಡದ ರೂಪಾಂತರವನ್ನು ನಮ್ಮ ಓದುಗರಿಗೆ ನೀಡುತ್ತಿದ್ದೇವೆ.**

❍ ನಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವುದು ಹೇಗೆ?

❑ ನಿನಗೊಂದು ಉದಾಹರಣೆಯ ಮೂಲಕ ತಿಳಿಸುತ್ತೇನೆ. ಒಂದು ಒಳ್ಳೆಯ ಮರದ ಕೊರಡನ್ನು ಮಾರುಕಟ್ಟೆಗೆ ಕೊಂಡೊಯ್ದಾಗ ಅದಕ್ಕೆ ವಿಶೇಷ ಬೇಡಿಕೆಯಾಗಲಿ, ಬೆಲೆಯಾಗಲಿ ಇರಲಾರದು. ಅದೇ ಕೊರಡನ್ನು ಕೊರೆದು ಹಲವಾರು ಸುಂದರ ವಸ್ತುಗಳನ್ನೋ, ಮೂರ್ತಿಗಳನ್ನೋ ತಯಾರಿಸಿದಾಗ ಅದರ ಬೆಲೆ ಅಧಿಕವಾಗುತ್ತದೆ. ನಮ್ಮ ಜೀವನವೂ ಅಂತೆಯೇ. ಮೌಲ್ಯಗಳನ್ನು ರೂಢಿಸಿಕೊಂಡಾಗ ಜೀವನ ಅಮೂಲ್ಯವಾಗುತ್ತದೆ. ನಮ್ಮ ಜೀವನವೀಣೆಯನ್ನು ಉತ್ತಮವಾದ ತಾರಸ್ವರದಲ್ಲೇ ಶ್ರುತಿಮಾಡಿ ಇಡಬೇಕು. ಆಗ ಅದರಿಂದ ಹೊರಡುವ ಇಂಪು ಅಧಿಕ. ಇದು ನಿನ್ನ ಮುಂದಿರುವ ನಿಜವಾದ ಕೆಲಸ.

ನಮ್ಮ ದೇಶದ ಪರಿಸ್ಥಿತಿ ಶೋಚನೀಯವಾಗಿದೆ. ನಮ್ಮ ಜನತೆಯಲ್ಲಿ ಎಷ್ಟೊಂದು ಸಾಮರ್ಥ್ಯವಿದೆ, ಕೌಶಲವಿದೆ, ಪ್ರತಿಭೆಯಿದೆ. ಆದರೆ ಇವೆಲ್ಲವೂ ನೋಡನೋಡುತ್ತಿರುವಂತೆಯೇ ವ್ಯರ್ಥವಾಗುತ್ತಿರುವುದನ್ನು ಕಂಡು ಆತಂಕವಾಗುತ್ತಿದೆ. ನಮ್ಮ ದೇಶದ ಯುವಕ-ಯುವತಿಯರೆಲ್ಲ ಎಂದು ಎಚ್ಚೆತ್ತುಕೊಳ್ಳುವರೋ ಎಂಬ ಚಿಂತೆ ಕಾಡುತ್ತಿದೆ.

ಜೀವನವು ಅತ್ಯಂತ ಅಮೂಲ್ಯವಾದುದು. ಅದು ಒಂದಿನಿತೂ ವ್ಯರ್ಥವಾಗದಂತೆ ಜಾಗೃತೆಯಿಂದಿರಬೇಕು. ಇದನ್ನು ಎಷ್ಟು ಬೇಗ ಅರಿಯುವೆಯೋ ಅಷ್ಟು ಸಫಲನಾಗುವೆ.

ನಿನ್ನ ಶರೀರವು ಆರೋಗ್ಯವಾಗಿದ್ದು ಎಲ್ಲ ಕೆಲಸಗಳನ್ನೂ ಮಾಡಲು ಸಹಾಯಕವಾಗುವಂತೆ ಅದನ್ನು ವ್ಯಾಯಾಮದಿಂದ ತರಬೇತುಗೊಳಿಸು. ನಮ್ಮ ರಾಷ್ಟ್ರದ ಜನತೆಯ ದೊಡ್ಡ ಕೊರತೆಯೇ ಅನಾರೋಗ್ಯ. ಆದರೆ ಕೇವಲ ಮಾಂಸಖಂಡಗಳನ್ನು ಬೆಳೆಸುವುದರ ಮೂಲಕ ಶರೀರ ದೃಢವಾಗುವುದಿಲ್ಲ. ಒಳ್ಳೆಯ ಆರೋಗ್ಯವಂತರೂ ಕೂಡ ಸೋಮಾರಿಗಳಾಗಿರಬಹುದಲ್ಲ! ಆದ್ದರಿಂದ ಚುರುಕಾಗಿದ್ದು ದೇಹದ ಎಲ್ಲ ಅಂಗಗಳಿಗೂ ವ್ಯಾಯಾಮವನ್ನು ನೀಡುತ್ತ ಎಲ್ಲ ರೀತಿಯ ಕೆಲಸ ಕಾರ್ಯಗಳಲ್ಲಿ ಆಸಕ್ತಿಯಿಂದ ದುಡಿಯುವುದನ್ನು ಅಭ್ಯಾಸ ಮಾಡು. ಶ್ರೀರಾಮಕೃಷ್ಣ ಪರಮಹಂಸರು ಹಾಗೂ ಶ್ರೀಮಾತೆ ಶಾರದಾದೇವಿ ದೈವೋನ್ಮತ್ತರಾಗಿದ್ದರೂ ಎಷ್ಟೊಂದು ಕೆಲಸವನ್ನು ಮಾಡುತ್ತಿದ್ದರು! ಅವರ ಜೀವನದಿಂದ ಕಲಿಯುವುದು ನಮ್ಮ ಕರ್ತವ್ಯ.

❍ ಪ್ರಾಣಶಕ್ತಿಯನ್ನು ನಿಯಂತ್ರಿಸುವ ಸುಲಭೋಪಾಯ ಯಾವುದು?

❑ ತಮ್ಮ ಶರೀರದಲ್ಲಿರುವ ಪ್ರಾಣಶಕ್ತಿಯನ್ನು ಜಾಗೃತಗೊಳಿಸಲು ಕೆಲವು ಸಾಧಕರು ಹಠಯೋಗವನ್ನು ಅಭ್ಯಾಸ ಮಾಡುತ್ತಿದ್ದರು. ಆದರೆ ಸ್ವಾಮಿ ವಿವೇಕಾನಂದರು ಆ ಪ್ರಾಣಶಕ್ತಿಯ ನಿಯಂತ್ರಣವನ್ನು ಕೆಲಸದ ಮೂಲಕವೂ ಸಾಧಿಸಬಹುದು ಎಂದು ನಮಗೆ ಈಗ ಹೊಸ ಸಹಜ ಮಾರ್ಗವೊಂದನ್ನು ತೋರಿಸಿಕೊಟ್ಟಿದ್ದಾರೆ. ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಕೆಲಸಗಳಲ್ಲಿ ತೊಡಗಬೇಕು, ಇಲ್ಲದಿದ್ದರೆ ಅದರಲ್ಲಿ ಪರಿಪೂರ್ಣತೆ ಸಾಧ್ಯವಿಲ್ಲ. ಸ್ವಾಮಿ ವಿವೇಕಾನಂದರ 'ರಾಜಯೋಗ' ದಲ್ಲಿ 'ಆಧ್ಯಾತ್ಮಿಕ ಪ್ರಾಣ' ದ ವರ್ಣನೆಯಿದೆ. ನೀನು ಅದನ್ನು ಓದಲೇಬೇಕು.

ಪ್ರಾಣಶಕ್ತಿಯ ಸ್ಥಿತಿಗತಿಗಳನ್ನು ಅರಿಯಲು ಪ್ರಾರ್ಥನೆ, ಏಕಾಗ್ರತೆ, ಧ್ಯಾನಗಳನ್ನು ಸ್ವಲ್ಪಮಟ್ಟಿಗಾದರೂ ಮಾಡಬೇಕು. ಅದಕ್ಕಾಗಿ ಸಮಯವನ್ನು ಮೀಸಲಿಡಬೇಕು.

ಶರೀರದಲ್ಲಿ ಇರುವ ಪ್ರಾಣವನ್ನು ಜಾಗೃತಗೊಳಿಸಿಕೊಂಡ ನಂತರ ಏಕಾಗ್ರತೆ ಹಾಗೂ ವಿವೇಕದ ಸಹಾಯದಿಂದ ಮನಸ್ಸನ್ನು